ಅ) ಹೊಸಪೇಟೆ ಕ್ಷೇತ್ರದ ಕಂಪ್ಲಿ ಹೋಬಳಿ ಸುಮಾರು 30 ಕಿ.ಮೀ. ದೂರವಿದ್ದು ಈ ಗ್ರಾಮ ಸುತ್ತಲೂ 30-35 ಗ್ರಾಮಗಳ ಬಡ ಜನತೆ ಗುಡಿಸಲಿನಲ್ಲಿ ವಾಸಿಸುತ್ತಿದ್ದು, ಬೆ ಅನಾಹುತ ಸಂಭವಿಸಿದಲ್ಲಿ ಸಹಾಯಕ್ಕೆ ಅಗ್ನಿಶಾಮಕ ದಳದ ವ್ಯವಸ್ಥೆ ಇರದೇ ಇರುವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಸರ್ಕಾರ ಈ ಸೌಲಭ್ಯವನ್ನು ಯಾವಾಗ ಒದಗಿಸುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು, ಸೈ ಕಲ್ಯಾಣ ರಾಜ್ಯ ಮಂತ್ರಿಗಳು) :

ಅ) ಕಂಪ್ಲಿಯಲ್ಲಿ ಅಗ್ನಿಶಾಮಕ ಠಾಣೆ ಇರುವುದಿಲ್ಲ.

ಆ) ಕಂಪ್ಲಿಯಲ್ಲಿ ಅಗ್ನಿ ಅನಾಹುತ ಸಂಭವಿಸಿದಲ್ಲಿ ಗಂಗಾವತಿ ಮತ್ತು ಹೊಸಪೇಟೆ ಇವೆರ ಠಾಣೆಗಳಿಂದ ವಾಹನ ನಿಯೋಜಿಸಿ ಅಗ್ನಿ ಕರೆಗಳನ್ನು ನಿರ್ವಹಿಸಲಾಗುತ್ತಿದೆ. ಪ್ರತಿಯೊಂದು ಅಗ್ನಿಶಾ ಠಾಣೆಯ ಕಾರ್ಯವ್ಯಾಪ್ತಿಯನ್ನು 40 ಕಿ.ಮೀ. ವರೆಗೆ ಸೀಮಿತಗೊಳಿಸಲಾಗಿದೆ. ಕಂಪ್ಲಿಯು ಗಂಗಾವತಿಯಿ 10 ಕಿ.ಮೀ. ಮತ್ತು ಹೊಸಪೇಟೆಯಿಂದ 32 ಕಿ.ಮೀ. ಅಂತರದಲ್ಲಿರುತ್ತದೆ. ಆದ್ದರಿಂದ ಈ ಹೊಸಪೇಟೆ ಮತ್ತು ಗಂಗಾವತಿ ಅಗ್ನಿಶಾಮಕ ಠಾಣೆಗಳಿಗೆ ಒಳಪಡುವ ಕಾರ್ಯವ್ಯಾಪ್ತಿಯಲ್ಲಿರು

ಇ) ಪ್ರಾರಂಭದಲ್ಲಿ ತಾಲ್ಲೂಕು ಮಟ್ಟದಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸುವ ಸರ್ಕಾರದ ಕಾರ್ಯನೀತಿಯಾಗಿದೆ. ತಾಲ್ಲೂಕು ಮಟ್ಟದಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಿದ ನಂ ಉಳಿದ ಸ್ಥಳಗಳಲ್ಲಿ ಆದ್ಯತೆ ಅಗತ್ಯತೆ ಮತ್ತು ಹಣಕಾಸಿನ ಲಭ್ಯತೆಗಳನ್ನು ಆಧರಿಸಿ ಅಗ್ನಿಶಾ ಠಾಣೆಗಳನ್ನು ಸ್ಥಾಪಿಸಲಾಗುವುದು.

ಅನುಕಂಪದ ಆಧಾರದ ಮೇಲೆ ನೇಮಕಾತಿ

291 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಬೇಕಾಗಿರುವ ಬಾಕಿಯಿರು ಸಂಖ್ಯೆ ಎಷ್ಟು? (ಅವುಗಳ ಇಲಾಖಾವಾರು ಮತ್ತು ಜಿಲ್ಲಾವಾರು ಪೂರ್ಣ ವಿ ನೀಡುವುದು).

ಆ) ಮಿತವೇತನ ಪದವೀಧರ ಅಭ್ಯರ್ಥಿಗಳು ಮೃತರಾದ ಮೇಲೆ ಅನುಕಂಪದ ಆಧ ಮೇಲೆ ನೇಮಕ ಮಾಡದೆ ಇರುವ ಪ್ರಕರಣಗಳೆಷ್ಟು. ಪೂರ್ಣ ವಿವರವನ್ನು ಕೊಡು (ಇಲಾಖಾ ಜಿಲ್ಲಾವಾರು).

ಇ) ಅನುಕಂಪದ ನೇಮಕಾತಿಗಳನ್ನು ಯಾವಾಗ ಪೂರ್ಣವಾಗಿ ಮಾಡಲಾಗುವುದು

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ನೇಮಕಾತಿ ಅಧಿಕಾರವನ್ನು ಇಲಾಖಾ ಮುಖ್ಯಸ್ಥರಿಗೆ ವಹಿಸಿಕೊಟ್ಟಿರುವುದರಿಂದ ಮಾಹಿತ ಕೇಂದ್ರೀಕೃತವಾಗಿ ಲಭ್ಯವಿಲ್ಲ.

ಆ) ಮಿತವೇತನ ಪದವೀಧರರು ಸರ್ಕಾರಿ ನೌಕರರಲ್ಲ ಇಂತಹವರು ಮೃತ ಪಟ್ಟಾಗ ಅವರ ಅವಲಂಬಿತರಿಗೆ ಅನುಕಂಪದ ನೇಮಕಾತಿ ನೀಡಲು ಅಸ್ಪದವಿಲ್ಲ.

ಇ) ಅನುಕಂಪದ ಮಾರ್ಗಸೂಚನೆಗಳನ್ವಯ ಈ ನೇಮಕಾತಿಯು ನಿರಂತರವಾಗಿ ನಡೆಯುತ್ತಿದೆ.

ಐ.ಎ.ಎಸ್, ಐ.ಪಿ.ಎಸ್. ಹಾಗೂ ಐ.ಎಫ್.ಎಸ್, ಅಧಿಕಾರಿಗಳ ನೇಮಕ

292 - ಶ್ರೀ ಆಯನೂರು ಮಂಜೂನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಪ್ರತಿವರ್ಷ ನೇರನೇಮಕಾತಿಯಾಗಿರುವ ಐ.ಎ.ಎಸ್. ಐ.ಪಿ.ಎಸ್. ಹಾಗೂ ಐ.ಎಫ್.ಎಸ್. ತರಬೇತಿ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಈ ಅಧಿಕಾರಗಳನ್ನು ಯಾವ ಶೇಕಡವಾರು ಆಧಾರದ ಮೇಲೆ ರಾಜ್ಯದ ಸೇವೆಗೆ ತೆಗೆದುಕೊಳ್ಳಲಾಗುತ್ತಿದೆ?

ಇ) ರಾಷ್ಟ್ರೀಯ ಪೂಲನಿಂದ ಕರ್ನಾಟಕಕ್ಕೆ ಕಳೆದ ಮೂರು ವರ್ಷಗಳಿಂದ ತೆಗದುಕೊಳ್ಳಲಾಗಿರುವ ಐ.ಎ.ಎಸ್.:ಐ.ಪಿ.ಎಸ್. ಅಧಿಕಾರಗಳ ಸಂಖ್ಯೆ ಎಷ್ಟು? ಇವರ ಹೆಸರು, ಭಾಷೆ, ಯಾವ ರಾಜ್ಯದವರು ಇತ್ಯಾದಿ ವಿವರವಾದ ಮಾಹಿತಿ ತಿಳಿಸುವುದು.

ಈ) ಈ ವಿಚಾರದಲ್ಲಿ ನೆರೆ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಯಾವ ಪರಿಸ್ಥಿತಿ ಇರುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ನೇರ ನೇಮಕಾತಿಯಿಂದ ಬಂದಿರುವ ಅಧಿಕಾರಿಗಳ ಸಂಖ್ಯೆ :

ಐ.ಎ.ಎಸ್.	:	200
ಐ.ಪಿ.ಎಸ್.	:	98
ಐ.ಎಫ್.ಎಸ್.	:	103.

ಆ) ರಾಜ್ಯದ ಹಿರಿಯ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಹುದ್ದೆಗಳ ಸಂಖ್ಯೆಯು ಶೇ: $66\ ^{2}/_{3}$ ಮತ್ತು ರಾಜ್ಯದ ನಿಯೋಜನೆ ಹುದ್ದೆಗಳು ರಜಾ ಮೀಸಲಾತಿ, ತರಬೇತಿ ಮೀಸಲಾತಿ ಮತ್ತು ಹಿರಿಯ ಹುದ್ದೆಗಳು.

ಇ) ಭಾರತ ಸರ್ಕಾರದಿಂದ ಕರ್ನಾಟಕ ಕೇಡರಗೆ ಹಂಚಿಕೆಯಾಗಿರುವ ಅಧಿಕಾರಿಗಳ ಸಂಖ್ಯೆ: